ಉಡುಪಿ ಪುರಸಭೆಯ ಒಳಚರಂಡಿ ವ್ಯವಸ್ಥೆ

553 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ನಗರದಲ್ಲಿ ಒಳಚರಂಡಿ ವ್ಯವಸ್ಥೆ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿರುವುದರಿಂದ ಅಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಸೂಚನೆ ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಸಂಪೂರ್ಣ ದುರಸ್ಥಿಯಲ್ಲಿರುವ ಉಡುಪಿ ಒಳಚರಂಡಿ ವ್ಯವಸ್ಥೆಯನ್ನು ಪುನಃ ಸುಸ್ಥಿತಿಗೆ ತರುವ ಯೋಜನೆ ಸರಕಾರದ ಮುಂದಿದೆಯೇ;

ಇ) ಇದ್ದಲ್ಲಿ ಸರಕಾರ ಕೈಗೊಂಡ ಕ್ರಮಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಬಂದಿದೆ.

ಆ) ಹೌದು.

ಇ) ಒಳಚರಂಡಿಯನ್ನು ಸುಸ್ಥಿತಿಯಲ್ಲಿಡಲು ರೂ. 25.00 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲು ಪುರಸಭೆಯು ಉದ್ದೇಶಿಸಿದೆ.

ನಗರಸಭೆಗಳ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ.

554 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ನಗರ ಸಭೆಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗಳನ್ನು ಹಸ್ತಾಂತರಿಸಿದ ಮೇಲೆ ಸರ್ಕಾರ ಸದರಿ ನಗರಸಭೆಗಳಿಗೆ ಹೆಚ್ಚುವರಿ ಅನುದಾನ ನೀಡಿದೆಯೇ?

ಆ) ರಾಜ್ಯದಲ್ಲಿ ಯಾವ ಯಾವ ನಗರ ಸಭೆಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಹಸ್ತಾಂತರಿಸಲಾಗಿದೆ. ವಿವರ ಒದಗಿಸುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ರಾಜ್ಯ ಸರ್ಕಾರವು ನಗರಸಭಗಳಿಗೆ ಅಭಿವೃದ್ಧಿ ಅನುದಾನ ನೀಡುತ್ತಿದೆ. ಅದನ್ನು ನೀರು ಸರಬರಾಜು ನಿರ್ವಹಣೆಗೆ ಬಳಸಿಕೊಳ್ಳಬಹುದಾಗಿದೆ. ನೀರು ಸರಬರಾಜು ನಿರ್ವಹಣೆಗೆಂದೇ ಹೆಚ್ಚುವರಿ ಅನುದಾನ ನೀಡಿರುವುದಿಲ್ಲ.

ಆ) ಈ ಕೆಳಕಂಡ ಸ್ಥಳೀಯ ಸಂಸ್ಥೆಗಳಿಗೆ ನೀರು ಸರಬರಾಜು:ಒಳಚರಂಡಿ ವ್ಯವಸ್ಥೆಯನ್ನು ನಿರ್ವಹಣೆಯನ್ನು ಮಂಡಳಿಯಿಂದ ಯೋಜನೆಯ ಕಾರ್ಯವನ್ನು ಮುಗಿಸಿ ಹಸ್ತಾಂತರ ಮಾಡಿದೆ.